# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ಘಟಕ.

ಕವಿಪ್ರನಿನಿ/ಬಿ. B93/ 35989/ 2016-17 ೮೪೫-೬

ನಿಗಮ ಕಾರ್ಯಾಲಯ, ಕಾವೇರಿ ಭವನ,
ಬೆಂಗಳೂರು. ದಿನಾಂಕ: ೧೨-09-2017

೧. ವ್ಯವಸ್ಥಾಪಕ ನಿರ್ದೇಶಕರು,
ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು.

೨. ಎಲ್ಲಾ ಆರ್ಥಿಕ ಸಲಹೆಗಾರರು,
ಕವಿಪ್ರನಿನಿ ಮತ್ತು ಎಲ್ಲಾ ವಿಸಕಂಗಳು,

ಮಾನ್ಯರೆ,

ವಿಷಯ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯಡಿ ಪ್ರತಿ ತಿಂಗಳ ಪಿಂಚಣಿ ವಂತಿಗೆಯನ್ನು ನಂತರದ ತಿಂಗಳ 5 ನೇ ದಿನಾಂಕದೊಳಗೆ ಪಾವತಿಸುವ ಬಗ್ಗೆ.

ಉಲ್ಲೇಖ೧. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 4/ಪಿಇಟಿ 2005 ದಿನಾಂಕ 31-03-2003
೨. ನಿಗಮದ ಆದೇಶ ಸಂಖ್ಯೆ ಕವಿಪ್ರನಿನಿ/ಬಿ.16/ಬಿ.14/ 4977/2005-06 ದಿನಾಂಕ 05-07-2007
೩. ನಿಗಮದ ಆದೇಶ ಸಂಖ್ಯೆ ಕವಿಪ್ರನಿನಿ/ಬಿ.16/ 4977/2005-06 ದಿನಾಂಕ 21-08-2007

*****

ಕವಿಪ್ರನಿನಿ / ವಿಸಕಂಗಳಲ್ಲಿ ದಿನಾಂಕ 01-04-2006 ರಂದು ಮತ್ತು ನಂತರ ಸೇವೆಗೆ ಸೇರುವ ಅಧಿಕಾರಿ / ನೌಕರರಿಗೆ ಹಾಲಿ ಜಾರಿಯಲ್ಲಿರುವ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯ ನೌಕರವಾರು ಪಿಂಚಣಿ ವಂತಿಗೆಯ ವಿವರಗಳನ್ನು ಜುಲೈ 2016 ರಿಂದ ಪ್ರಾರಂಭಿಸಿ, ಪ್ರತಿ ತಿಂಗಳೂ ಕಂಪನಿಗಳ ಲೆಕ್ಕ ಘಟಕಗಳೇ ಕವಿಪ್ರನಿನಿಯ ಜಾಲತಾಣದಲ್ಲಿರುವ ತಂತ್ರಾಂಶದಲ್ಲಿ ನಂತರದ ತಿಂಗಳ 5ನೇ ದಿನಾಂಕದೊಳಗಾಗಿ ದಾಖಲಿಸುತ್ತಿದ್ದು, ಈ ನಿಟ್ಟಿನಲ್ಲಿ ಕಂಪನಿ / ಲೆಕ್ಕ ಘಟಕಗಳ ಕ್ರಿಯಾಶೀಲತೆಯನ್ನು ಅಭಿನಂದಿಸಲಾಗಿದೆ.

ಆದರೆ ಸದರಿ ಯೋಜನೆಯ ಪಿಂಚಣಿ ವಂತಿಗೆಯನ್ನು ಕಂಪನಿಗಳು ವಿಳಂಬವಾಗಿ ಕೆಇಎನ್‌ಡಿಸಿಪಿಎಸ್ ಘಟಕಕ್ಕೆ ಪಾವತಿಸುತ್ತಿರುವುದನ್ನು ಗಮನಿಸಲಾಗಿದೆ. ಈ ರೀತಿ ಪಿಂಚಣಿ ವಂತಿಗೆಯನ್ನು ವಿಳಂಬವಾಗಿ ಪಾವತಿ ಮಾಡುವುದರಿಂದ ಅದನ್ನು ಹೂಡಿಕೆ ಮಾಡುವುದರಲ್ಲಿಯೂ ವಿಳಂಬವಾಗುವುದರಿಂದ ಆದರ ಮೇಲೆ ಗಳಿಸಬಹುದಾದ ಬಡ್ಡಿಯು ನಷ್ಟವಾಗುತ್ತಿದೆ. ಇದರಿಂದ ಈ ಯೋಜನೆಯ ನೌಕರರಿಗೆ ಬಡ್ಡಿ ಗಳಿಕೆ ಕುಂಠಿತವಾಗುತ್ತಿದೆ. ಪಿಂಚಣಿ ವಂತಿಗೆಯನ್ನು ವಿಳಂಬವಾಗಿ ಪಾವತಿ ಮಾಡುವ ಕಂಪನಿಗಳಿಗೆ ಆಯಾ ತಿಂಗಳೇ ಈ ಕಛೇರಿಯಿಂದ ಪತ್ರ ಬರೆದು ಇನ್ನು ಮುಂದೆ ವಿಳಂಬ ಪಾವತಿಯನ್ನು ತಡೆಯುವಂತೆ ಕೋರಲಾಗಿರುತ್ತದೆ. ಆದಾಗ್ಯೂ, ಬಹುತೇಕ ಕಂಪನಿಗಳು ಪ್ರತಿ ತಿಂಗಳ 5ನೇ ದಿನಾಂಕದೊಳಗಾಗಿ ಪಿಂಚಣಿ ವಂತಿಗೆಯನ್ನು ಪಾವತಿಸದೇ

ಇರುವುದು ವಿಷಾದನೀಯ. ಕಳೆದ ನಾಲ್ಕು ತಿಂಗಳಿನಲ್ಲಿ ಈ ರೀತಿ ವಿಳಂಬವಾಗಿ ವಂತಿಗೆ ಪಾವತಿಸಿರುವುದರಿಂದ ಸುಮಾರು ರೂ.5,86,750/- ಬಡ್ಡಿ ಗಳಿಸಲಾಗಿರುವುದಿಲ್ಲ.

ಈ ಮೇಲಿನ ಹಿನ್ನಲೆಯಲ್ಲಿ, ಸದರಿ ಯೋಜನೆಯ ನೌಕರರ ಹಿತ ಕಾಪಾಡುವ ದೃಷ್ಟಿಯಿಂದ, ಎಲ್ಲಾ ಕಂಪನಿಗಳೂ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯ ಪಿಂಚಣಿ ವಂತಿಗೆಯನ್ನು ಪ್ರತಿ ತಿಂಗಳ 5ನೇ ದಿನಾಂಕದೊಳಗಾಗಿ ಕೆಇಎನ್‌ಡಿಸಿಎಸ್ ಘಟಕಕ್ಕೆ ಕಡ್ಡಾಯವಾಗಿ ಪಾವತಿಸಬೇಕೆಂದು ಕೋರಲಾಗಿದೆ. ಈ ನಿಟ್ಟಿನಲ್ಲಿ ಯಾವುದೇ ಕಾರಣಕ್ಕೂ ಆಗುವ ವಿಳಂಬಕ್ಕೆ, ಕೆಇಎನ್‌ಡಿಸಿಎಸ್ ಘಟಕವು ಎಲ್.ಐ.ಸಿ ಯಲ್ಲಿ ಹೂಡಿಕೆ ಮಾಡಿ ಗಳಿಸುವ ಬಡ್ಡಿಯನ್ನು ಸಂಬಂಧಿಸಿದ ಕಂಪನಿಯು ಪಾವತಿಸಬೇಕಾಗುವ ಸಾಧ್ಯತೆಯನ್ನು ಪರಿಶೀಲಿಸಬೇಕಾಗುವುದು. ಇಂತಹ ಒಂದು ಕ್ರಮಕ್ಕೆ ಅವಕಾಶ ನೀಡದೆ ಪ್ರತಿ ತಿಂಗಳ 5ನೇ ದಿನಾಂಕದೊಳಗಾಗಿ ಪಿಂಚಣಿ ವಂತಿಗೆಯನ್ನು ಪಾವತಿಸುವಂತೆ ಮತ್ತೊಮ್ಮೆ ಕೋರಲಾಗಿದೆ.

ತಮ್ಮ ವಿಶ್ವಾಸಿ,

ನಿರ್ದೇಶಕರು
(ಆ ಮತ್ತು ಮಾ.ಸಂ)

ಪ್ರತಿಗಳು:

೧. ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರ ಆಪ್ತ ಕಾರ್ಯದರ್ಶಿ ರವರಿಗೆ. ವ್ಯವಸ್ಥಾಪಕ ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.
೨. ವ್ಯವಸ್ಥಾಪಕ ನಿರ್ದೇಶಕರು, ಪಿ.ಸಿ.ಕೆ.ಎಲ್ ರವರ ಆಪ್ತ ಕಾರ್ಯದರ್ಶಿ ರವರಿಗೆ. ವ್ಯವಸ್ಥಾಪಕ ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.
೩. ನಿರ್ದೇಶಕರು (ಹಣಕಾಸು), ರವರ ಆಪ್ತ ಕಾರ್ಯದರ್ಶಿ ರವರಿಗೆ. ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.

**ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ** www.kptcl.com/eprasarana ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

೧. ಎಲ್ಲಾ ಮುಖ್ಯ ಇಂಜಿನಿಯರ್ ಕವಿಪ್ರನಿನಿ / ಎಸ್ಕಾಂಗಳು
೨. ಎಲ್ಲಾ ಅಧೀಕ್ಷಕ ಇಂಜಿನಿಯರ್ / ನಿಯಂತ್ರಣಾಧಿಕಾರಿ ಕವಿಪ್ರನಿನಿ / ಎಸ್ಕಾಂಗಳು
೩. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ / ಉಪ ನಿಯಂತ್ರಣಾಧಿಕಾರಿ ಕವಿಪ್ರನಿನಿ / ಎಸ್ಕಾಂಗಳು
೪. ಎಲ್ಲಾ ಲೆಕ್ಕಾಧಿಕಾರಿಗಳು ಕವಿಪ್ರನಿನಿ / ಎಸ್ಕಾಂಗಳು
೫. ಎಲ್ಲಾ ಲೆಕ್ಕಾಧಿಕಾರಿಗಳು (ಆಂತರಿಕ ತನಿಖೆ) ಕವಿಪ್ರನಿನಿ / ಎಸ್ಕಾಂಗಳು